ಎಂದು ಅವನು ನಾಯಕ್‌ನ ಕೂಗನ್ನು ನಿರ್ಲಕ್ಷಿಸಿ, ಏನನ್ನೂ ಮಾತನಾಡದೆ ಆ ಮಹಿಳೆಯರ ಬಳಿ ಬಂದು ವಯಸ್ಸಾದ ಮಹಿಳೆಯನ್ನು ಉರ್ದುವಿನಲ್ಲಿ ಕೇಳಿದ, "ಕ್ಯಾ ಹುವಾ ಅಪಾ?" ಎಂದು. ಸಾವಿನ ಸಮ್ಮುಖದಲ್ಲಿ ಅಲ್ಲಿ ಯಾರೂ ತಮ್ಮವರು ಇಲ್ಲದೆ ಇದ್ದಂತಹ ಸಂದರ್ಭದಲ್ಲಿ ಆಪತ್ತಿಗೆ ಎಂದು ಒಂದು ಮುಖ ಕಂಡುಬಂದಿದ್ದರಿಂದ ಆಕೆ ಇನ್ನಷ್ಟು ಅಳುತ್ತಾ ಆಸರೆಯನ್ನು ಬಯಸುತ್ತಾ, "ಮೇರಿ ಬಚ್ಚಿ... ಮೇರಿ ಬಚ್ಚಿ" (ನನ್ನ ಕೂಸು... ನನ್ನ ಕೂಸು...) ಎಂದಳು.

"ಏನಾಯ್ತು ಅಕ್ಕ, ನಿನ್ನ ಮಗುಗೆ ಏನಾಯಿತು?" ಎಂದು ಕಕ್ಕುಲತೆಯಿಂದ ಖಲಂದರ್ ಕೇಳಿದ.

"ಅಯ್ಯೋ ಆಸ್ಪತ್ರೆಗೆ ಕರೆದುಕೊಂಡು ಹೋಗ್ತಿದೀವಿ. ಈ ಕ್ಷಣದಲ್ಲಿ ಹಾಲು ಕುಡೀತಿದ್ದ ಕೂಸು ಕಣ್ಣು ತಿರುಗಿಸಿ ಎಲ್ಲಾ ಕಕ್ಕಿ ಬಿಡ್ತು. ಅದು ನಮಗೆ ದಕ್ಕಲಿಲ್ಲ" ಎಂದು ಆಕೆ ಇನ್ನಷ್ಟು ಎದೆ ಬಡಿದುಕೊಂಡು ಅಳುತ್ತಾ ತಲೆಯ ಮೇಲೆ ಸೆರಗನ್ನು ಸರಿಯಾಗಿ ಹೊದ್ದುಕೊಂಡಳು.

ಈಗ ಖಲಂದರ್‌ನ ಜವಾಬುದಾರಿ ಇನ್ನಷ್ಟು ಹೆಚ್ಚಿತು. ಅವನು ಬಾಗಿ ಅವಳ ಕೈಯಿಂದ ಮಗುವನ್ನು ತೆಗೆದುಕೊಂಡು ತನ್ನ ಹೆಗಲಮೇಲಿದ್ದ ರುಮಾಲಿನಿಂದ ಮಗುವನ್ನು ಸುತ್ತಿದ. ಮತ್ತು ನಾಯಕ್ ಕೂಡಾ ಏಕಭಾವದಿಂದ ಅವನ ಚರ್ಯೆಯನ್ನು ಗಮನಿಸುತ್ತಿದ್ದ.

"ಅದನ್ನು ತಗೊಂಡು ಕೆಳಗೆ ನಡಿ ಚಿಕ್ಕಪ್ಪ" ಎಂದು ಹೇಳಿದವನೇ ನಾಯಕ್ ತಾನು ಮುಂದೆ ಬಂದು ವಯಸ್ಸಾದ ಆ ಮಹಿಳೆಯನ್ನು ಕುರಿತು, "ಇವಳು ನಿನಗೆ ಏನಾಗಬೇಕಮ್ಮಾ?" ಎಂದು ಕೇಳಿದ.

"ಇವಳು ನನ್ನ ಮಗಳು ಕಣಪ್ಪ. ಒಂದು ತಿಂಗಳ ಹಿಂದೆ ಇವಳ ಹೆರಿಗೆಯಾಯ್ತು. ಹುಟ್ಟಿದಾಗಿನಿಂದ ಮಗು ಆಸ್ಪತ್ರೆಯಲ್ಲೇ ಇದೆ. ಹೊಳೆನರಸೀಪುರದಲ್ಲಿ ಆ ಮಗುವನ್ನು ದೊಡ್ಡಾಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಹಾಸನದ ಆಸ್ಪತ್ರೆಗೆ ಸೇರಿಸಿದ್ದೆ. ಏನೂ ಪ್ರಯೋಜನವಾಗಲಿಲ್ಲ. ಇವತ್ತು

